ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
ಆಗು ನೀ ಅನಿಕೇತನ
BE BOUNDLESS
Central College Campus, Dr. B.R. Ambedkar Veedhi, Bengaluru – 560 001 Ph.No.080-22961016 / 22131385

ಸಂ: ಬಿಸಿಯು/ವಿವಿಪ/ಅಸಾಮಾನ್ಯ ಸಭೆ/2020-21 ದಿನಾಂಕ: 23.04.2020

ಗೆ

ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
ಬೆಂಗಳೂರು

ಮಾನ್ಯರೆ,

ವಿಷಯ: ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ 2020-21ನೇ ಹಣಕಾಸು ವರ್ಷದ ಆಯವ್ಯಯ ಅಂದಾಜುಗಳಿಗೆ ವಿದ್ಯಾವಿಷಯಕ ಪರಿಷತ್ ಸದಸ್ಯರ ಅಭಿಪ್ರಾಯಗಳನ್ನು ಆನ್-ಲೈನ್ ಪರಿಚಲನೆಯ ಮುಖಾಂತರ (By Circulation Online) ಸ್ವೀಕರಿಸಿದ ನಡಾವಳಿಗಳು.

ಉಲ್ಲೇಖ:1) ವಿಶ್ವವಿದ್ಯಾಲಯದ ಪತ್ರ ಸಂ. ಬಿಸಿಯು/ವಿವಿಪ/110/2019-20 ದಿನಾಂಕ: 23.03.2020
2) ಕುಲಪತಿಗಳ ಅನುಮೋದನೆ ದಿನಾಂಕ: 23.04.2020

ಕೋವಿಡ್-19 ಕೋರೊನಾ ವೈರಸ್ ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಸಭೆ-ಸಮಾರಂಭಗಳನ್ನು ಒಳಗೊಂಡಂತೆ ಎಲ್ಲಾ ಕಾರ್ಯಕ್ರಮಗಳನ್ನು ನಿರ್ಬಂಧಿಸಿ ಸರ್ಕಾರ ರಜೆ ಘೋಷಿಸಿರುವ ಹಿನ್ನೆಲೆಯಲ್ಲಿ ದಿನಾಂಕ 31.03.2020 ರಂದು 2020-21 ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳ ಅನುಮೋದನೆಗಾಗಿ ಕರೆಯಲಾಗಿದ್ದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯನ್ನು ಮುಂದೂಡಿ, ಆಯವ್ಯಯ ಅಂದಾಜುಗಳಿಗೆ ತುರ್ತಾಗಿ ಅನುಮೋದನೆ ಪಡೆಯಬೇಕಾದ ಅನಿವಾರ್ಯತೆಯಿಂದಾಗಿ, ಆನ್-ಲೈನ್ ಪರಿಚಲನೆಯ ಮುಖಾಂತರ (By circulation online) ತಾತ್ವಿಕ ಅನುಮೋದನೆ ನೀಡಲು ವಿದ್ಯಾವಿಷಯಕ ಪರಿಷತ್ ಸದಸ್ಯರಿಗೆ ವಿನಂತಿಸಲಾಗಿತ್ತು. ಪರಿಸ್ಥಿತಿ ನಿಯಂತ್ರಣಕ್ಕೆ ಬಂದನಂತರ ಕರೆಯಲಾಗುವ ಮುಂದಿನ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಆಯವ್ಯಯ ಅಂದಾಜುಗಳ ಕುರಿತು ವಿಸ್ತೃತ ಚರ್ಚೆಯನ್ನು ಮಾಡಲಾಗುವುದೆಂದು ಮಾನ್ಯ ಸದಸ್ಯರಿಗೆ ತಿಳಿಸಲಾಗಿತ್ತು.

ಸನ್ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರು, ವಿಶ್ವವಿದ್ಯಾಲಯದ ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯ ವೆಚ್ಚಗಳಾದ ಸಂಬಳ-ಸಾರಿಗೆ, ವಿದ್ಯುಚ್ಛಕ್ತಿ ಬಿಲ್ಲು, ಜಲಮಂಡಳಿ ಇತ್ಯಾದಿ ಅಗತ್ಯ ಸೇವೆಗಳ ವೆಚ್ಚಗಳನ್ನು ಪಾವತಿಸಲು 2020-21 ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ತಾತ್ವಿಕ ಅನುಮೋದನೆ ನೀಡಿರುತ್ತಾರೆ. ಸದಸ್ಯರ ಒಟ್ಟಾಭಿಪ್ರಾಯದಂತೆ ದಾಖಲಿಸಲಾದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು / ನಿರ್ಣಯವನ್ನು ಈ ಪತ್ರದೊಂದಿಗೆ ಕಳುಹಿಸಲಾಗಿದೆ. ನಡಾವಳಿಗಳ/ನಿರ್ಣಯ ಕುರಿತು ಆಕ್ಷೇಪಣೆಗಳೇನಾದರೂ ಇದ್ದು ತಿಳಿಸಿದಲ್ಲಿ ಅವುಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಿ ಸ್ಥಿರೀಕರಿಸಬಹುದಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಪ್ರೊ. ವಿ ಶಿವರಾಂ) 23/4/2020
ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001
2. ಅಪರ ಮುಖ್ಯ ಕಾಯಾದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು-560001
3. ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳ ಆಪ್ತಕಾರ್ಯದರ್ಶಿಗಳು, ಬಿ.ಸಿ.ಯು.
4. ಕಛೇರಿ ಪ್ರತಿ/ರಕ್ಷಣಾ ಕಡತ

ಬೆಂಗಳೂರು
ಕೇಂದ್ರ ವಿಶ್ವವಿದ್ಯಾಲಯ
BENGALURU
CENTRAL UNIVERSITY
ಆಗು ನೀ ಅನಿಕೇತನ
BE BOUNDLESS
Central College Campus, Dr. B.R. Ambedkar Veedhi, Bengaluru – 560 001 Ph.No.080-22961016 / 22131385

ಸಂ: ಬಿಸಿಯು/ವಿವಿಪ/ಅಸಾಮಾನ್ಯ/2020-21 ದಿನಾಂಕ: 14.04.2020

**ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಸದಸ್ಯರ ಅಭಿಪ್ರಾಯಗಳನ್ನು ಆನ್-ಲೈನ್ ಪರಿಚಲನೆಯ ಮುಖಾಂತರ (By Circulation Online) ಸ್ವೀಕರಿಸಿ ದಾಖಲಿಸಲಾದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.**

ವಿಷಯ: 2020-21ನೇ ಹಣಕಾಸು ವರ್ಷದ ಆಯವ್ಯಯ ಅಂದಾಜುಗಳಿಗೆ ಆನ್-ಲೈನ್ ಪರಿಚಲನೆಯ ಮುಖಾಂತರ **(By Circulation Online)** ವಿದ್ಯಾವಿಷಯಕ ಪರಿಷತ್ ಸಭೆಯ ತಾತ್ವಿಕ ಅನುಮೋದನೆ ನೀಡುವ ಕುರಿತು

**ಪರಾಮರ್ಶಕ ಟಿಪ್ಪಣಿ:**

ರಾಜ್ಯ ಮತ್ತು ದೇಶಾದ್ಯಂತ ಹರಡಿರುವ ಕೋವಿಡ್-19 ಕೋರೊನಾ ವೈರಸ್ ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಸರ್ಕಾರ ದೇಶಾದ್ಯಂತ ಲಾಕ್ ಡೌನ್ ಜಾರಿಗೊಳಿಸಿ, ಸಭೆ-ಸಮಾರಂಭಗಳನ್ನು ಒಳಗೊಂಡಂತೆ ಎಲ್ಲಾ ಕಾರ್ಯಕ್ರಮಗಳನ್ನು ನಿರ್ಬಂಧಿಸಿ ರಜೆ ಘೋಷಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ 2020-21 ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿ ಅನುಮೋದನೆ ನೀಡಲು ದಿನಾಂಕ 31.03.2020 ರಂದು ನಿಗದಿಪಡಿಸಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಯನ್ನು ಈ ಕಛೇರಿ ಪತ್ರ ಸಂ: ಬಿಸಿಯು/ವಿವಿಪ/ಅಸಾಮಾನ್ಯ ಸಭೆ/2020-21 ದಿನಾಂಕ: 23.03.2020 ರ ಪ್ರಕಾರ ಮುಂದೂಡಲಾಗಿತ್ತು. 2020-21 ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳನ್ನು ತುರ್ತಾಗಿ ಪರಿಗಣಿಸಿ ಅನುಮೋದಿಸಬೇಕಾದ ಅನಿವಾರ್ಯತೆ ಇದ್ದುದರಿಂದ, ವಿಷಯಸೂಚಿಯನ್ನು ಆನ್-ಲೈನ್ ಪರಿಚಲನೆಯ ಮುಖಾಂತರ (By circulation online) ತಾತ್ವಿಕ ಅನುಮೋದನೆ ಪಡೆಯಲು ಹಾಗೂ ಪರಿಸ್ಥಿತಿ ನಿಯಂತ್ರಣಕ್ಕೆ ಬಂದನಂತರ ಕರೆಯಲಾಗುವ ಮುಂದಿನ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಆಯವ್ಯಯ ಅಂದಾಜುಗಳ ಕುರಿತು ವಿಸ್ತೃತ ಚರ್ಚೆಯನ್ನು ಮಾಡಲಾಗುವುದೆಂಬ ಅಭಿಪ್ರಾಯದೊಂದಿಗೆ ಆಯವ್ಯಯ ಅಂದಾಜುಗಳನ್ನು ವಿದ್ಯಾವಿಷಯಕ ಪರಿಷತ್ ಸದಸ್ಯರ ಪರಿಗಣನೆಗೆ ಇ-ಮೇಲ್ ಮುಖಾಂತರ ಕಳುಹಿಸಲಾಗಿತ್ತು.

ಮೇಲ್ಕಂಡ ಪ್ರಸ್ತಾವನೆಯನ್ನು ವಾಸ್ತವಿಕ ಸ್ಥಿತಿಗೆ ಪೂರಕವಾಗಿ ಸ್ಪಂದಿಸಿದ ಸನ್ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರು, ವಿಶ್ವವಿದ್ಯಾಲಯದ ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯ ವೆಚ್ಚಗಳಾದ ಸಂಬಳ-ಸಾರಿಗೆ, ವಿದ್ಯುಚ್ಛಕ್ತಿ ಬಿಲ್ಲು, ಜಲಮಂಡಳಿ ಇತ್ಯಾದಿ ಅಗತ್ಯ ಸೇವೆಗಳ ವೆಚ್ಚಗಳನ್ನು ಪಾವತಿಸಲು 2020-21 ನೇ ಸಾಲಿನ ಆಯವ್ಯಯ ಅಂದಾಜು ಪತ್ರಕ್ಕೆ ತಾತ್ವಿಕ ಅನುಮೋದನೆ ನೀಡಲು ಹಾಗೂ ಈ ಕುರಿತು ಮುಂಬರುವ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ವಿಸ್ತೃತವಾದ ಚರ್ಚೆಯನ್ನು ಮಾಡಲು ಈ ಕೆಳಕಂಡ ಮಾನ್ಯ ಸದಸ್ಯರು ತಮ್ಮ ಸಹಮತಿಯನ್ನು ಇ-ಮೇಲ್, ವಾಟ್ಸಾಪ್ ಮುಖಾಂತರ ತಿಳಿಸಿರುತ್ತಾರೆ.

ಆನ್-ಲೈನ್ ಪರಿಚಲನೆಯ ಮುಖಾಂತರ (By circulation online) ಅಭಿಪ್ರಾಯ ವ್ಯಕ್ತಪಡಿಸಿದ ಸದಸ್ಯರು:

| | |
|---|---|
| 1. | Vice-Chancellor, (Chairman)<br>Bengaluru Central University, Bengaluru |
| 2. | Dr. Harish. S<br>Principal, Vijaya Evening College, Bengaluru |
| 3. | Dr. Asha Ganesh<br>Principal, C.B. Bandari Jain College, Bengaluru |
| 4. | Dr. Latha Kumari<br>Principal, Sanjay Gandhi College of Education, Bengaluru |
| 5. | Dr. B.A. Anuradha |

| | |
|---|---|
| | Principal, Al-Ameen Institute of Management, Bengaluru |
| 6. | Dr. R Parvathi<br>Principal, V.E.T First Grade College, Bengaluru |
| 7. | Dr. Rajesh E.B.<br>Principal, Cauvery B.Ed. College, Bengaluru |
| 8. | Prof. D.G. Srinivasa Murthy<br>Principal, Vivekananda College of Education, Bengaluru |
| 9. | Prof. K. Ramesh,<br>Principal, Al-Ameen College of Education, Bengaluru |
| 10. | Dr. Lydia Samuel<br>Principal, St. Anne's Women's College, Bengaluru |
| 11. | Dr. Padmaja<br>Principal, MLA Institute of Higher Studies, Bengaluru |
| 12. | Prof. K.N. Godamani,<br>#749, "Sampige", 6th Block, Dr. Rajkumar Road, Rajajinagar, Bengaluru |
| 13. | Smt. Anupama S.B,<br>#602, 2nd Main, Lalitha Gas Agencies Road, Kengeri Satellite Town, Bengaluru |
| 14. | Dr. B.N. Umesh,<br>#144, 10 Downing, Kannamangala, Whitefield, Bengaluru |
| 15. | Dr. M.S. Mahadeva Naik<br>Professor, Dept. of Mathematics, Bengaluru Central University, Bengaluru |
| 16. | Dr. V.R. Devaraj<br>Professor & Chairman, Dept. of Biochemistry, Bengaluru Central University, Bengaluru |
| 17. | Dr. V. Gayathri,<br>Professor, Dept. of Chemistry, Bengaluru Central University, Bengaluru |
| 18. | Dr. S. Hariprasad,<br>Professor, Dept. of Chemistry, Bengaluru Central University, Bengaluru |
| 19. | Dr. P.R. Chethana,<br>Professor, Dept. of Chemistry, Bengaluru Central University, Bengaluru |
| 20. | Dr. M. Pandurangappa<br>Dean, Faculty of Science, Department of Chemistry, Bengaluru Central University Bengaluru |
| 21. | Dr. M. Muniraju,<br>Dean, Faculty of Commerce, Department of Commerce, Bengaluru Central University Bengaluru |
| 22. | Dr. N. Narasimhamurthy,<br>Dean, Faculty of Arts, Department of Communication, Bengaluru Central University Bengaluru |
| 23. | Registrar (Evaluation),<br>Bengaluru Central University, Bengaluru |
| 24. | Finance Officer,<br>Bengaluru Central University, Bengaluru |
| 25. | Registrar,<br>Bengaluru Central University, Bengaluru |

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
ಆಗು ನೀ ಅನಿಕೇತನ
BE BOUNDLESS
Central College Campus, Dr. B.R. Ambedkar Veedhi, Bengaluru – 560 001 Ph.No.080-22961016 / 22131385

ಮೇಲ್ಕಂಡ ಸದಸ್ಯರ ಒಟ್ಟಾಭಿಪ್ರಾಯದಂತೆ ಕೆಳಕಂಡ ತೀರ್ಮಾನವನ್ನು ದಾಖಲಿಸಲಾಗಿದೆ.

## ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನ

**2020–21** ನೇ ಸಾಲಿನ ಆಯವ್ಯಯ ಅಂದಾಜು ಪತ್ರದ ಮೇಲೆ ಮುಂಬರುವ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ವಿಸ್ತೃತವಾದ ಚರ್ಚೆಯನ್ನು ಮಾಡುವ ನಿಬಂಧನೆಗೆ ಒಳಪಟ್ಟು ವಿಶ್ವವಿದ್ಯಾಲಯದ ಅವಶ್ಯಕ ಹಾಗೂ ಅನಿವಾರ್ಯ ವೆಚ್ಚಗಳಾದ ಸಂಬಳ–ಸಾರಿಗೆ, ವಿದ್ಯುಚ್ಛಕ್ತಿ ಬಿಲ್ಲು, ಜಲಮಂಡಳಿ ಇತ್ಯಾದಿ ಅಗತ್ಯ ಸೇವೆಗಳ ವೆಚ್ಚಗಳನ್ನು ನಿರ್ವಹಿಸಿ ಪಾವತಿಸಲು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ **2020–21** ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರಕ್ಕೆ ತಾತ್ವಿಕ ಅನುಮೋದನೆ ನೀಡಲು ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.

ಸದಸ್ಯರ ಸಹಕಾರಕ್ಕಾಗಿ ಕುಲಪತಿಗಳು ಹಾಗೂ ಕುಲಸಚಿವರು ಧನ್ಯವಾದಗಳನ್ನು ಅರ್ಪಿಸಿದರು.

| | |
|---|---|
| ಸಹಿ | ಸಹಿ |
| ಕುಲಸಚಿವರು ಹಾಗೂ | ಕುಲಪತಿಗಳು ಹಾಗೂ |
| ಸದಸ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |

ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ